
ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ಶಿವಮೊಗ್ಗದ ಕೋಟೆ ಆಂಜನೇಯ ದೇವಾಲಯಕ್ಕೆ ಭೇಟಿ ನೀಡಿದರು.

ಸಂಪುಟ : 44 | ಸಂಚಿಕೆ : 19 | ಪುಷ್ಯ–ಮಾಘ | ಕಲಿಯುಗಾಬ್ದ 5124 | 15–01–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಸಮರ್ಥ ಯುವಜನರ ನಿರ್ಮಾಣಕ್ಕಾಗಿ ಬೇಕು ಸದೃಢ ಸಮಾಜ


ವಿಶ್ವದ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಎರಡನೇ ರಾಷ್ಟ್ರ ಭಾರತ. ಈ ವರ್ಷದ ಅಂತ್ಯದೊಳಗೆ ಚೀನಾವನ್ನು ಬದಿಗೆ ಸರಿಸಿ ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನವನ್ನು ಪಡೆಯಲಿದ್ದೇವೆ ಎನ್ನುವುದನ್ನು ಹಲವು ವರದಿಗಳು ತಿಳಿಸುತ್ತವೆ. ಆದರೆ ಜಗತ್ತಿನ ಸುಮಾರು ಶೇ.20ರಷ್ಟು ಜನಸಂಖ್ಯೆ ಹೊಂದಿರುವ ಭಾರತಕ್ಕೆ ಇಲ್ಲಿನ ಜನತೆ ಮಾನವ ಸಂಪನ್ಮೂಲವಾಗಿ ಪರಿಣಮಿಸುತ್ತಾರೋ ಅಥವಾ ಮಾನವ ಪ್ರಮಾದಗಳಾಗುತ್ತಾರೋ ಎನ್ನುವುದರ ಮೇಲೆ ಈ ನಾಡಿನ ಅಭಿವೃದ್ಧಿಯ ಪಥ ನಿಂತಿದೆ. ಅದರಲ್ಲೂ ಶೇ.60ಕ್ಕೂ ಹೆಚ್ಚು ಯುವಕರನ್ನೇ ಹೊಂದಿರುವ ಯೌವನಭರಿತ ಭಾರತದ ಭವಿಷ್ಯ ಈ ಯುವಕರ ಕೈಗಳ ಮೇಲೆಯೇ ನಿಂತಿದೆ.

ಭಾರತದ ಯುವಕರು ನಾಡಿನ ಅಭಿವೃದ್ಧಿಗೆ ಪೂರಕವಾಗಿದ್ದರೆ, ಯುವಕರ ಉಜ್ವಲ ಭವಿಷ್ಯಕ್ಕಾಗಿ ಪೂರಕವಾದ ಸಮಾಜ ಅಥವಾ ವ್ಯವಸ್ಥೆ ನಮ್ಮಲ್ಲಿದ್ದರೆ ಆಗ ನಾಡಿನ ಪರಮ ವೈಭವಕ್ಕೆ ಯಾವುದೇ ಕುಂದುಕೊರತೆಗಳಿರುವುದಿಲ್ಲ. ಈ ಸಂದರ್ಭದಲ್ಲಿ ಈ ರಾಷ್ಟ್ರ ಕಂಡಂತಹ ಅದ್ಭುತ ದಾರ್ಶನಿಕ ಯೋಗಿ ಅರವಿಂದರ 150ನೇ ಜನ್ಮವರ್ಷಾಚರಣೆಯನ್ನು ಆಚರಿಸುತ್ತಿರುವ ವೇಳೆ ಅವರ ಯುವಕರ ಕುರಿತಾದ ಚಿಂತನೆಯ ಅವಲೋಕನ ಮಾಡುವುದು ಸೂಕ್ತವೆನಿಸುತ್ತದೆ. ಅವರ ಮಾತಿನಂತೆ "The young men should remember the glory of the past, should feel the pain of the present, dream for the future" ಎಂದರೆ ಭಾರತದ ಪ್ರತಿ ಯುವಕ ಈ ನಾಡಿನ ಗತವೈಭವವನ್ನು ಸ್ಮರಿಸಬೇಕು, ವರ್ತಮಾನದ ತಲ್ಲಣಗಳಿಗೆ ಆತನ ಹೃದಯ ಮಿಡಿಯಬೇಕು, ಭರವಸೆಯ ಭವಿಷ್ಯದ ಕನಸುಗಳನ್ನು ಕಾಣಬೇಕು ಎಂದು ತಿಳಿಸಿದ್ದಾರೆ.

ಅರವಿಂದರ ಯುವಕರ ಕುರಿತಾದ ಈ ಶ್ರೇಷ್ಠ ಚಿಂತನೆ ನಿಜಕ್ಕೂ ಪ್ರಸ್ತುತ. ಆದರೆ ಇದರ ಅನುಷ್ಠಾನದ ಸಂದರ್ಭದಲ್ಲಿ ಹಲವು ಮೂಲಭೂತ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ತಮ್ಮ ಪ್ರಸ್ತುತದ ಜವಾಬ್ದಾರಿ ಮತ್ತು ಮುಂದಿನ ಗುರಿಯನ್ನು ಅರಿಯದ ಯುವಕನಿಗೆ ಅರವಿಂದರನ್ನು ಪರಿಚಯಿಸುವವರು ಯಾರು? ಅರವಿಂದರೇನೋ ಯುವಕರ ಜವಾಬ್ದಾರಿಯನ್ನು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ಅವರ ಚಿಂತನೆಯನ್ನು ಯುವಕರಿಗೆ ತಿಳಿಸುವವರು ಯಾರು? ಅರವಿಂದರ ಚಿಂತನೆಯನ್ನು ಯಾವುದೋ ಮೂಲಗಳ ಮೂಲಕ ಅರಿತ ಯುವಕನಿಗೆ ಚಿಂತನೆಗಳನ್ನು ಯುಗಾನುಕೂಲಕ್ಕೆ ತಕ್ಕಂತೆ ಪರಿವರ್ತನೆ ಮಾಡಿಕೊಳ್ಳುವ ಹಿಂದೂ ಧರ್ಮದ ನೆಲೆಗಟ್ಟಿನಲ್ಲಿ ಅರ್ಥೈಸುವವರು ಯಾರು? ಪಾಶ್ಚಾತ್ಯಕರಣದ ಪ್ರಭಾವಕ್ಕೆ ಸಿಲುಕಿರುವ ಯುವಕರಿಗೆ ಆಧುನಿಕತೆಗೆ ತಕ್ಕಂತೆ ಭಾರತೀಯ ಮೌಲ್ಯಗಳ ಪರಿಚಯ ಮಾಡುವವರು ಯಾರು? ಹೀಗೆ ಪ್ರಶ್ನೆಗಳ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತವೆ. ಇಂತಹ ಪ್ರಶ್ನೆಗಳು ಉದ್ಭವವಾಗುವ ಈ ಸಂದರ್ಭದಲ್ಲಿ ಯುವಕರ ಜವಾಬ್ದಾರಿಯ ಕುರಿತಾದ ಅರವಿಂದರ ಹೇಳಿಕೆಯನ್ನು ಮೂರು ಭಾಗಗಳಲ್ಲಿ ಪರಾಮರ್ಶಿಸುವ ಪ್ರಯತ್ನ ಪಡೋಣ.

1. The young men should remember the glory of the past. ಇಲ್ಲಿ ಭಾರತದ ಪ್ರತಿ ಯುವಕನೂ ನಮ್ಮ ನಾಡಿನ ಗತವೈಭವವನ್ನು ಅರಿತುಕೊಳ್ಳಬೇಕು ಎಂದು ತಿಳಿಸುತ್ತಾರೆ. ಆದರೆ ನಮ್ಮ ನಾಡಿನ ಗತವೈಭವವನ್ನು ಯುವಪೀಳಿಗೆಗೆ ತಿಳಿಸುವವರು ಯಾರು? ಪ್ರತಿಯೊಬ್ಬ ಯುವಕನ ಬೆಳವಣಿಗೆಯಲ್ಲಿ ತನ್ನ ಮನೆ, ತಾನು ಕಲಿಯುವ ಶಾಲೆ, ತನ್ನ ಸುತ್ತ ಮುತ್ತಲಿನ ಸಮಾಜ ಹಾಗೂ ವೈಯಕ್ತಿಕ ಆಸಕ್ತಿ ಪ್ರಮುಖ ಪಾತ್ರವಹಿಸುತ್ತದೆ. ಪ್ರತಿ ಮಗುವಿನ ಸಂಸ್ಕೃತಿಯ ಮೂಲ ತನ್ನ ಮನೆಯೇ ಆಗಿರುತ್ತದೆ. ಆದರೆ ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರು ಎಂಬ ಮಾತು ಇಂದು ಅನೇಕ ಮನೆಗಳ ಹೊಸ್ತಿಲನ್ನು ದಾಟಿ ಸಂವತ್ಸರಗಳೇ ಕಳೆದಿರುವಾಗ ಸಂಸ್ಕೃತಿಯ ಪರಿಚಯದ ಮೂಲವಾಗಿ ಹಲವು ಮನೆಗಳು ಕಾರ್ಯನಿರ್ವಹಿಸುತ್ತಿಲ್ಲ. ಏಕೆಂದರೆ ತಮ್ಮ ಪಾಲಿನ ಜವಾಬ್ದಾರಿಯನ್ನೂ ಹೆಚ್ಚು ಹಣ ಕೊಟ್ಟು ಕಳುಹಿಸುವ ಶಾಲೆಗಳ ಮೇಲೆ ಹೆತ್ತವರು ಹೊರೆಸಿದ್ದಾರೆ. ಇನ್ನು ಮಗು ವಿದ್ಯಾಭ್ಯಾಸದ ಸಂದರ್ಭದಲ್ಲಿ ಅತೀ ಹೆಚ್ಚು ಕಾಲ ಶಾಲೆಯಲ್ಲಿ ಕಳೆಯುತ್ತದೆ. ಆದರೆ ಶಾಲೆಯಲ್ಲಿ ಸಿಗುವ ಶಿಕ್ಷಣ ಕೇವಲ ಪರೀಕ್ಷೆಯ ಅಂಕಗಳಿಗೆ ಸೀಮಿತವಾಗಿದ್ದಾಗ ನಮ್ಮ ಪರಂಪರೆಯ ಪರಿಚಯವಾಗುವುದಾದರೂ ಹೇಗೆ? ಶಾಲೆ ಎನ್ನುವುದು ವಿದ್ಯಾರ್ಥಿಗಳಿಗೆ ಸಾಮಾಜಿಕ ಜೀವನದ ಪರಿಕಲ್ಪನೆಯನ್ನೂ ಕಟ್ಟಿಕೊಡುವ ಕೇಂದ್ರ. ಆದರೆ ಇಂದು ಶಾಲೆಗಳೂ ಸಮಾಜದಲ್ಲಿ ವಿದ್ಯಾರ್ಥಿ ಎದುರಿಸಬಹುದಾದ ಸವಾಲುಗಳಿಗೆ ಅವರನ್ನು ತಯಾರಿಸದೆ, ಕೇವಲ ಪರೀಕ್ಷೆ ಕೇಂದ್ರಿತ ವಿದ್ಯಾಭ್ಯಾಸಕ್ಕೆ ಗಮನಕೊಡುತ್ತಾರೆ. ಈ ರೀತಿಯಾಗಿ ಪ್ರಾಥಮಿಕ ಹಂತದಲ್ಲಿ ಬೆಳೆದು ಬಂದ ಮಗುವಿಗೆ ಕಾಲೇಜು ಹಂತದಲ್ಲಿ ನಾಡಿನ ಬಗ್ಗೆ ತಿಳಿದುಕೊಳ್ಳಬೇಕು ಎಂದು ಅನಿಸುವುದಾದರೂ ಹೇಗೆ? ಒಂದು ವೇಳೆ ಅನಿಸಿದರೂ ಅವನಿಗೆ ಮಾರ್ಗದರ್ಶನ ಮಾಡುವ ಗುರುಗಳು ಸಿಗುತ್ತಾರೆಯೇ? ಪರಂಪರೆಯ ಕುರಿತು ತಿಳಿದುಕೊಳ್ಳಲು ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡುವ ಗುರುಗಳು ಸಿಕ್ಕರೆ ಅದು ಅಂತಹ ವಿದ್ಯಾರ್ಥಿಯ ಸೌಭಾಗ್ಯವೇ ಸರಿ. ಇದರ ಜೊತೆಗೆ ಸಮಾಜದಲ್ಲಿನ ಹಿರಿಯರು ಮತ್ತು ಅವರ ಸ್ನೇಹಿತರ ವೃಂದದ ಪ್ರಭಾವದಿಂದ ಯುವಕರು ಅನೇಕ ಸಂಗತಿಗಳೆಡೆಗೆ ಆಸಕ್ತಿವಹಿಸುತ್ತಾರೆ. ಆದರೆ ಸುತ್ತಮುತ್ತಲಿನ ಪ್ರಭಾವಲಯ ಋಣಾತ್ಮಕವಾಗಿದ್ದರೆ ಏನು ಮಾಡಲಾದೀತು? ಕೊನೆಯದಾಗಿ ವೈಯಕ್ತಿಕ ಆಸಕ್ತಿಯಾಧಾರಿತವಾಗಿ ವಿದ್ಯಾರ್ಥಿಯೊಬ್ಬ ತಾನು ತನ್ನ ರಾಷ್ಟ್ರದ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಲು ಬಯಸಬೇಕಾದರೆ ಈ ಮೇಲಿನ ಯಾವುದಾದರೂ ಒಂದು ಸ್ತರದಲ್ಲಿ ಆತನಿಗೆ ಪ್ರೇರಣೆ ಸಿಗಲೇಬೇಕು. ಸಿಗದಿದ್ದರೆ? ಯೋಚಿಸಬೇಕಾದ ಸಂಗತಿಯಲ್ಲವೆ?

2. Should feel the pain of the present – ವರ್ತಮಾನದ ತಲ್ಲಣಗಳನ್ನು ಅರಿತುಕೊಳ್ಳಬೇಕು ಎನ್ನುವುದು ಅರವಿಂದರು ತಿಳಿಸಿದ ಎರಡನೇ ಜವಾಬ್ದಾರಿ. ಆದರೆ ಇಂದಿನ ಯುವಜನತೆಗೆ ಇದೇ ಇವತ್ತಿನ ತಲ್ಲಣ ಎನ್ನುವುದನ್ನು ತಿಳಿಸುವವರು ಯಾರು? ಸೈದ್ಧಾಂತಿಕವಾಗಿ, ರಾಜಕೀಯವಾಗಿ, ಪಕ್ಷ–ಸಂಘಟನೆ ಪ್ರೇರಿತವಾಗಿ, ಇದು ಇಂದಿನ ತಲ್ಲಣ ಎಂದಾದರೂ ಗುರುತಿಸಲು ಸಾಧ್ಯವೇ? ಅದಕ್ಕೂ ಮಿಗಿಲಾಗಿ ತನ್ನ ತಂದೆ–ತಾಯಿಯ, ಅಣ್ಣ–ಅಕ್ಕಂದಿರ, ಒಡನಾಡಿ ಗೆಳೆಯನ ಕಷ್ಟವನ್ನೇ ತಿಳಿಯಲಾಗದ ಯುವಕರನ್ನು ನಾವು ನೋಡುತ್ತಿರುವಾಗ ಅವರಿಂದ ರಾಷ್ಟ್ರದ ವರ್ತಮಾನದ ತಲ್ಲಣಗಳ ಬಗ್ಗೆ ಚಿಂತಿಸುವುದನ್ನು ಅಪೇಕ್ಷಿಸಬಹುದೇ? ಒಮ್ಮೆ ಹಿರಿಯರಾದವರು ನಮ್ಮನ್ನು ನಾವೇ ಪ್ರಶ್ನಿಸಿಕೊಂಡರೆ ನಮ್ಮ ಮಕ್ಕಳು ಜವಾಬ್ದಾರಿ ಹೀನರಾಗಲು ಕಾರಣ ತಿಳಿಯುವುದಲ್ಲದೆ ಖಂಡಿತವಾಗಿಯೂ ಅವರನ್ನು ತಮ್ಮ ಕರ್ತವ್ಯವನ್ನು ಅರಿಯುವ ನಿಟ್ಟಿನಲ್ಲಿ ಯೋಚಿಸುವಂತೆ ಮಾಡಬಹುದು. ಆದರೆ ಮನೆಯಿಂದ ಹಿಡಿದು ಶಾಲೆಯವರೆಗೂ ವಿದ್ಯಾರ್ಥಿಯೊಂದಿಗೆ ಒಡನಾಡುವ ಪ್ರತಿಯೊಬ್ಬ ಹಿರಿಯರೂ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದಾಗ ಮಾತ್ರ ಈ ಧನಾತ್ಮಕ ಬದಲಾವಣೆಯನ್ನು ಬಯಸಬಹುದು. ವೈಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ದೇಶ ಕಣ್ಣಮುಂದೆ ಬರಬೇಕು ಎನ್ನುವ, ಸಮಾಜ ನನ್ನದು ಎಂಬ ಜವಾಬ್ದಾರಿ ಯಾವ ಮೂಲದಿಂದಾದರೂ ಪರಿಚಯವಾದಾಗ ಸಮಾಜಕ್ಕೆ ಪೂರಕ ವ್ಯಕ್ತಿತ್ವ ರೂಪುಗೊಳ್ಳುತ್ತದೆ.



3. Dream for the future – ಭವಿಷ್ಯಕ್ಕಾಗಿ ಕನಸು ಕಾಣಬೇಕು ಎನ್ನುವ ಅರವಿಂದರು ತಿಳಿಸಿದ ಮೂರನೇ ಜವಾಬ್ದಾರಿಯ ಅರಿವು ಯವಕರಿಗೆ ಅರವಿಂದರ ಕುರಿತು ತಿಳಿಯದಿದ್ದರೂ ವ್ಯಷ್ಟಿಯಾಗಿ ಇದು ಚಾಲನೆಯಲ್ಲಿದೆ. ಆದರೆ ಸಮಷ್ಟಿಯ ರೂಪ ಸಿಗಬೇಕಿದೆ. ಇಂದು ಕನಸು ಕಾಣುವವರ ಕೊರತೆ ಸಮಾಜಕ್ಕಿಲ್ಲ. ಆದರೆ ಸಮಾಜಕ್ಕಾಗಿ ಕನಸು ಕಾಣುವ ಕಂಗಳು ಸಿಗುವುದು ವಿರಳ. ತಾನು ಕಂಡ ಕನಸಿನ ನನಸಿಗಾಗಿ ತಾನು ಏನು ಮಾಡಬೇಕೆಂಬ ಸದೃಢ ನಿರ್ಣಯ ಯುವಕರಿಗೆ ತಿಳಿಯದಿದ್ದರೂ ಇಂತಿಷ್ಟು ವರ್ಷದಲ್ಲಿ ನಾನು ಹೀಗಾಗಿರಬೇಕು ಎನ್ನುವ ಕನಸನ್ನು ಪ್ರತಿಯೊಬ್ಬರೂ ಕಾಣುತ್ತಾರೆ. ಅಂತಹ ನಮ್ಮ ಪ್ರತಿ ಯುವಕನಿಗೂ ಸಮಾಜಕ್ಕಾಗಿ ಕನಸ್ಸು ಕಾಣುವ ಕಂಗಳನ್ನೂ, ಮಿಡಿಯುವ ಹೃದಯವನ್ನು ಮತ್ತು ದುಡಿಯುವ ಕೈಗಳನ್ನು ಜಾಗೃತ ಗೊಳಿಸಬೇಕಾದರೆ ಜಾಗೃತಿ ಗೊಳಿಸುವವರು ತಯಾರಾಗಬೇಕಲ್ಲವೇ. ಮನೆ, ಶಾಲೆ, ಸಮಾಜ, ಸ್ನೇಹಿತರು ಇವರಲ್ಲಿ ಯಾರೂ ಯುವಕನನ್ನು ಜಾಗೃತಿಗೊಳಿಸದಿದ್ದರೆ, ತನ್ನ ಆತ್ಮಾವಲೋಕನವನ್ನಾದರೂ ಆತ ಹೇಗೆ ಮಾಡಿಕೊಳ್ಳಬಲ್ಲ? ಹಾಗಾಗಿ ಪ್ರತಿ ಮಗು ಉತ್ತಮನಾಗುವಂತೆ ಉಪಕಾರಿಯಾಗುವಂತೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

Be Good Do Good ಎಂಬ ಧ್ಯೇಯವನ್ನು ಮೊದಲು ಪಾಲಿಸಿ ನಂತರ ತಮ್ಮ ಮಕ್ಕಳನ್ನೂ ಒಳಗೊಂಡಂತೆ ಇತರರಿಗೆ ತಿಳಿಸುವ Policy ಮಾಡಬೇಕಾದ ಅನಿವಾರ್ಯತೆ ಮುಂದಿನ ಪೀಳಿಗೆಗೆ ಬೋಧಿಸುವವರಿಗೆ ಇದೆ. ಮನೆ, ಶಾಲೆ, ಸಮಾಜ, ಸ್ನೇಹಿತವರ್ಗ, ಸಂಘ–ಸಂಸ್ಥೆಗಳು ಈ ನಾಡಿನ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸಲು ಮೊದಲು ತಾವು ಸನ್ನದ್ಧರಾಗಬೇಕು. ಇಲ್ಲದಿದ್ದರೆ ಜನಸಂಖ್ಯೆಯಲ್ಲಿ ಮುಂಚೂಣಿಯಲ್ಲಿರುವ ನಾವು ನಮ್ಮತನವನ್ನು ಅರಿಯದೇ, ನಮ್ಮ ಜವಾಬ್ದಾರಿಗಳನ್ನು ತಿಳಿಯದೆ ಅನೇಕ ಕ್ಷೇತ್ರಗಳಲ್ಲಿ ಎಡವಬೇಕಾದೀತು. If the population of our country is skilled then we can attain SKILL INDIA. If we fail to enrich skill in our population then that demography will lead to KILL INDIA. ಆದ್ದರಿಂದ Youths are not useless, they are used less ಎಂಬುದನ್ನು ಅರಿತು ಸಮಾಜ ಕಾರ್ಯಪ್ರವೃತ್ತವಾದಾಗ ಯುವಕರಿಗೆ ಅರವಿಂದರೂ ಪರಿಚಿತರಾಗುತ್ತಾರೆ, ಅವರ ಚಿಂತನೆಯೂ ಅನುಷ್ಠಾನಗೊಳ್ಳುವಂತೆ ತಯಾರಾಗುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ.


# ಸಂಸ್ಮರಣೆ ರಮಣ ಮಹರ್ಷಿ (ಡಿಸೆಂಬರ್ 30, 1879 – ಏಪ್ರಿಲ್ 14, 1950)

ಭಗವಾನ್ ರಮಣ ಮಹರ್ಷಿಗಳು ಡಿಸೆಂಬರ್ 30, 1879ರ ವರ್ಷದಂದು ತಮಿಳುನಾಡಿನ ಮಧುರೆಯ ಸಮೀಪದ ತಿರುಚುಳಿ ಎಂಬ ಗ್ರಾಮದಲ್ಲಿ ಜನಿಸಿದರು. ಅವರ ತಾಯಿ ಅಳಗಮ್ಮಾಳ್ ಅವರು. ತಂದೆ ಸುಂದರಂ ಅಯ್ಯರ್ ಅವರು. ರಮಣ ಮಹರ್ಷಿಗಳ ಹುಟ್ಟು ಹೆಸರು ವೆಂಕಟರಮಣ ಎಂದು. ವೆಂಕಟರಮಣನಿಗೆ 12 ವರ್ಷ ವಯಸ್ಸಾಗಿದ್ದಾಗ ತಂದೆ ಸುಂದರಂ ಅಯ್ಯರ್ ನಿಧನರಾದರು. ಕುಟುಂಬದ ಹೊಣೆಗಾರಿಕೆಯನ್ನು ಆತನ ಚಿಕ್ಕಪ್ಪಂದಿರಾದ ನೆಲ್ಲಿಯಪ್ಪ ಅಯ್ಯರ್ ಮತ್ತು ಸುಬ್ಬು ಅಯ್ಯರ್ ವಹಿಸಿಕೊಂಡರು.

ಚಿಕ್ಕಂದಿನಿಂದ ವೆಂಕಟರಮಣನಿಗೆ ತನ್ನನ್ನು ಎಲ್ಲಿಂದಲೋ ಕರೆಯೊಂದು ಕರೆಯುತ್ತಿದೆ ಎಂದು ಭಾಸವಾಗುತ್ತಿತ್ತು. ಒಮ್ಮೆ ಅವರ ಮನೆಗೆ ಹಿರಿಯರೊಬ್ಬರು ಬಂದಾಗ 'ತಾವು ಎಲ್ಲಿಂದ ಬಂದಿರಿ?' ಎಂದು ಪ್ರಶ್ನಿಸಿದ. ಆ ಹಿರಿಯರು ನಾನು ಅರುಣಾಚಲದಿಂದ ಬಂದಿದ್ದೇನೆ ಎಂದಾಗ, ಅದೇ ಅದೇ ನನ್ನನ್ನು ಕರೆಯುತ್ತಿರುವುದು ಎಂಬ ಹೊಳಹು ಆತನಲ್ಲಿ ಉಂಟಾಯಿತು.

ಶ್ರೀ ರಮಣರು ಆತ್ಮ ವಿಚಾರವನ್ನು, ಅಂದರೆ, 'ನಾನು ಯಾರು' ಎಂಬ ಆತ್ಮಾನ್ವೇಷಣಾ ವಿಧಾನವನ್ನು ಆತ್ಮ ಜ್ಞಾನ ಪ್ರಾಪ್ತಿಗೆ ಮುಖ್ಯ ಸಾಧನವೆಂದು ಬೋಧಿಸುವರು – ಈ ವಿಧಾನವನ್ನು 'ಶ್ರೀ ರಮಣ ನುಟ್ರಿರಟ್ಟು' ಎಂಬ ಪ್ರಬಂಧದಲ್ಲಿ ವಿಸ್ತರಿಸಿರುವರು. ಶ್ರೀ ರಮಣರು ಈ ಆತ್ಮವಿಚಾರ ವಿಧಾನವನ್ನು ಬುಧ್ಧ್ಯಾತ್ಮಕ ವ್ಯಾಯಾಮವೆಂದು ಅಪಾರ್ಥ ಮಾಡಬಾರದೆಂದೂ ಎಚ್ಚರಿಸುವರು – ಅಂದರೆ, ಉಚಿತ ರೀತಿಯಲ್ಲಿ ಮಾಡಿದ್ದಲ್ಲಿ, ಈ ಆತ್ಮವಿಚಾರವು 'ನಾನು' ಎಂಬ ಸಂವೇದನೆಯ ಮೇಲೆ ಆಲೋಚನೆಗಳಿಲ್ಲದೆ ಸುಭದ್ರವಾಗಿ ಮತ್ತು ಪ್ರಖರವಾಗಿ ಕೇಂದ್ರೀಕರಿಸುವುದೇ ಆಗಿರುವುದು ಎಂದು ವಿಶದಪಡಿಸಿರುವರು. ಶ್ರೀ ರಮಣರ ಸ್ವಂತ ಆತ್ಮವಿಚಾರವನ್ನು ಅವರು ಈ ರೀತಿ ಬಣ್ಣಿಸುವರು:

"ನನ್ನ ಸೋದರಮಾವನ ಮನೆಯ ಮೊದಲನೆಯ ಮಾಳಿಗೆಯ ಒಂದು ಕೋಣೆಯಲ್ಲಿ ಹಾಗೆಯೇ ಕುಳಿತಿದ್ದೆ. ನಾನು ಅಪರೂಪಕ್ಕೆಲ್ಲೋ ಜ್ವರಕ್ಕೀಡಾಗುತ್ತಿದ್ದೆ, ಅಂದಂತೂ ನನ್ನ ಆರೋಗ್ಯದಲ್ಲಿ ಏನೇನೂ ತೊಂದರೆಯಿರಲಿಲ್ಲ. ಆದರೆ ಹಠಾತ್ತನೆ ಸಾವಿನ ಭಯ ನನ್ನನ್ನಾವರಿಸಿತು. ನನ್ನ ಆರೋಗ್ಯದಲ್ಲಿ ಇದಕ್ಕಾಗಿ ಅದಾವುದೇ ಕಾರಣವಿರಲಿಲ್ಲ. ಅಲ್ಲದೆ ಭಯಗ್ರಸ್ತನಾಗಲು ಕಾರಣವೇನಾದರೂ ಇರಬಹುದೆ ಎಂದು ಪರೀಕ್ಷಿಸಲೂ ನನ್ನಲ್ಲಿ ಸಂಕಲ್ಪವೇಳಲಿಲ್ಲ. ನಾನು ಸಾವಿಗೀಡಾಗುತ್ತಿದ್ದೇನೆಂದು ಅನಿಸಿತು ಮತ್ತು ಅದರ ವಿಷಯವಾಗಿ ಏನು ಮಾಡಬೇಕೆಂದು ಆಲೋಚಿಸತೊಡಗಿದೆ. ಮರಣ ಭೀತಿಯ ಆಘಾತ ನನ್ನ ಮನಸ್ಸನ್ನು ಅಂತರ್ಮುಖಿಯಾಗುವಂತೆ ಮಾಡಿತು. ಯಾವುದೇ ಪದಗಳನ್ನು ಉಪಯೋಗಿಸದೆ ನನಗೇ ನಾನು ಮಾನಸಿಕವಾಗಿ ಈ ರೀತಿ ಹೇಳಿಕೊಂಡೆ: 'ಈಗ ಸಾವು ಬಂದಿದೆ. ಹಾಗೆಂದರೇನು? ಸಾಯುತ್ತಿರುವುದು ಯಾವುದು? ಈ ದೇಹ ಸಾಯುತ್ತದೆ'. ತತ್ ಕ್ಷಣವೇ ನಾನು ಸಾವಿನ ಆಗುವಿಕೆಯನ್ನು ನಟಿಸಿದೆ. ದೇಹವು ಸೆಟೆದು ಕೊಂಡಿದೆಯೋ ಎಂಬಂತೆ ನಾನು ನನ್ನ ಕಾಲುಗಳನ್ನು ಚಾಚಿ ಅಲುಗಾಡದಂತಿದ್ದೆ. ಈ ವಿಚಾರಕ್ಕೆ ಹೆಚ್ಚು ವಾಸ್ತವ್ಯವನ್ನು ಕೊಡಲು ಶವವಿರುವಂತೆಯೇ ಅನುಕರಿಸಿದೆ. ನನ್ನ ಉಸಿರನ್ನು ಹಿಡಿದು ಕೊಂಡೆ, ತುಟಿಗಳನ್ನು ಬಿಗಿಯಾಗಿ ಯಾವುದೇ ಸದ್ದು ಬಾರದಂತೆ, ('ನಾನು' ಎಂಬುದಾಗಲೀ ಅಥವಾ ಇನ್ನಾವುದೋ ಶಬ್ದ ಆಗಲಿ ಬಾರದಂತೆ) ಮುಚ್ಚಿಕೊಂಡೆ. ಆಗ ನನಗೇ ಹೇಳಿಕೊಂಡೆ: 'ಸರಿ ಹಾಗಾದರೆ, ಈ ದೇಹ ಸತ್ತು ಹೋಗಿದೆ. ಸೆಟೆದುಕೊಂಡ ಹಾಗೆಯೇ ಅದನ್ನು ಕೊಂಡೊಯ್ದು ಸುಟ್ಟು ಭಸ್ಮ ಮಾಡಿ ಬಿಡುತ್ತಾರೆ. ಆದರೆ ಈ ದೇಹದ ಸಾವಿನಿಂದ ನಾನು ಸತ್ತೆನೇ? ಈ ದೇಹ



'ನಾನು' ಎಂಬುದೇ? ಅದು ಮೌನ ಮತ್ತು ಜಡ. ಆದರೆ ನಾನು ನನ್ನ ವ್ಯಕ್ತಿತ್ವದ ಸಂಪೂರ್ಣ ಶಕ್ತಿಯನ್ನು ಮತ್ತು ನನ್ನಲ್ಲಿನ 'ನಾನು' ಎಂಬ ಸ್ವರವನ್ನೂ ಕೂಡ ಇದರಿಂದ ಬೇರೆ ಎಂಬ ಅನುಭವವನ್ನು ಪಡೆಯುತ್ತಿದ್ದೇನೆ. ಆದ್ದರಿಂದ ಈ ದೇಹವನ್ನು ಮೀರಿದ ಚೇತನ ನಾನು. ದೇಹ ಸಾಯುತ್ತದೆ, ಆದರೆ ಅದನ್ನು ಮೀರಿಸಿದ ಚೇತನವನ್ನು ಸಾವು ಮುಟ್ಟಲಾರದು. ಹಾಗೆಂದರೆ, ನಾನು ಸಾವಿಲ್ಲದ ಚೇತನ'. ಇದೆಲ್ಲವೂ ಮಂದ ಆಲೋಚನೆಗಳಲ್ಲ. ಅದು ನನ್ನಲ್ಲಿ ಆಲೋಚನೆಗಳೇ ಇಲ್ಲವೇನೋ ಎಂಬಂತೆ ಜೀವಂತ ಸತ್ಯಗಳಂತೆ ನನ್ನಲ್ಲಿ ಸುಸ್ಪಷ್ಟವಾಗಿ ಮಿಂಚಿ ಹಾದು ಹೋಯಿತು. ನಾನು ಸತ್ಯವಾದುದಾವುದೋ ಆಗಿದ್ದೆ. ನನ್ನ ಪ್ರಸ್ತುತ ಸ್ಥಿತಿಯಲ್ಲಿನ ಒಂದೇ ಸತ್ಯತೆಯಾಗಿದ್ದೆ ಮತ್ತು ದೇಹದೊಡನೆ ಪ್ರಜ್ಞಾಪೂರ್ವಕವಾಗಿ ಜೋಡಣೆಗೊಂಡಿದ್ದೆಲ್ಲವೂ ಆ 'ನಾನು' ಎಂಬುದರ ಮೇಲೆಯೇ ಕೇಂದ್ರೀಕೃತವಾಗಿತ್ತು. ಆ ಕ್ಷಣದ ನಂತರ, 'ನಾನು' ಅಥವಾ ಆತ್ಮವು, ಈ ಪ್ರಬಲ ವಿಸ್ಮಿತತೆಯಿಂದ ತನ್ನ ಮೇಲೆಯೇ ಗಮನವನ್ನು ಕೇಂದ್ರೀಕರಿಸಿತು. ಸಾವಿನ ಭಯವು ಎಂದೆಂದಿಗೂ ಮಾಯವಾಗಿ ಹೋಯಿತು. ಅಹಂ ಎಂಬುದು ಆತ್ಮ ಪ್ರಜ್ಞೆಯ ಮಹಾಪೂರದಲ್ಲಿ ಕಳೆದು ಹೋಯಿತು. ಆ ಸಮಯದಿಂದ ಆತ್ಮಲೀನತೆಯು ಉಪ್ಪಿಯಿಲ್ಲದೆ ಮುಂದುವರೆಯಿತು. ಬೇರೆ ಆಲೋಚನೆಗಳು ಸಂಗೀತದ ನಾದಗಳಂತೆ ಬಂದು ಹೋಗಬಹುದು. ಆದರೆ 'ನಾನು' ಎಂಬುದು ಮೂಲಭೂತ ಶೃತಿಯಂತೆ ಮುಂದುವರೆಯಿತು. ಅದು ಉಳಿದೆಲ್ಲ ನಾದಗಳ ಪಾಯದಲ್ಲಿದ್ದು ಉಳಿದೆಲ್ಲ ನಾದಗಳನ್ನು ಮಿಶ್ರಿಸುವ ಶೃತಿ".

ಕಾವ್ಯಕಂಠ ಗಣಪತಿ ಎಂಬುವರು ಹಲವಾರು ವರ್ಷಗಳ ಮಹಾನ್ ತಪಸ್ಸನ್ನು ಆಚರಿಸಿ ಅನೇಕ ಸಿದ್ಧಿಗಳನ್ನು ಪಡೆದುಕೊಂಡರು. ಲೋಕಸಂಚಾರ ಮಾಡುತ್ತಿರುವಾಗ ಅವರು ತಿರುವಣ್ಣಾಮಲೆಗೂ ಬಂದರು. ಈ ಗಣಪತಿ ಮುನಿಗಳಿಗೆ ಯಾರನ್ನಾದರೂ ದೃಷ್ಟಿಸಿ ನೋಡಿದರೆ ಸಾಕು ಆತ ಏನನ್ನು ಯೋಚಿಸುತ್ತಿದ್ದಾನೆಂದು ಹೇಳಿಬಿಡುವ ಮಹಾನ್ ಸಿದ್ಧಿ ಇತ್ತು. ಈ ತಿರುವಣ್ಣಾಮಲೆಯಲ್ಲಿ ರಮಣರು ಗುಹೆಯಲ್ಲಿ ಕುಳಿತು ತಪಸ್ಸು ಮಾಡುವುದನ್ನು ನೋಡುವುದಕ್ಕೆ ದೇಶವಿದೇಶಗಳಿಂದ ಜನ ಬರುತ್ತಾರಲ್ಲ. ಆ ರಮಣರ ಮನಸ್ಸಿನಲ್ಲೇನಿದೆಯೋ ತಿಳಿಯೋಣ ಎನಿಸಿತು ಅವರಿಗೆ. ಅದೇ ಕುತೂಹಲದಿಂದ ರಮಣರ ಧ್ಯಾನಮಂದಿರಕ್ಕೆ ಕಾವ್ಯಕಂಠ ಗಣಪತಿಗಳು ಆಗಮಿಸಿದರು.

ಬಂದವರೇ ರಮಣರ ಮುಂದೆ ಪದ್ಮಾಸನ ಹಾಕಿ ಕುಳಿತು, ರಮಣರನ್ನೇ ದಿಟ್ಟಿಸಿ ನೋಡಿದರು. ಒಂದು ನಿಮಿಷ, ಎರಡು – ಹತ್ತು ಹದಿನೈದು ಇಪ್ಪತ್ತು ನಿಮಿಷವಾದರೂ ರಮಣರು ಏನು ಯೋಚಿಸುತ್ತಿದ್ದಾರೆಂದು – ಆ ಮನೋಧರ್ಮ ಏನೆಂದೂ ಕಾವ್ಯ ಕಂಠಗಣಪತಿಗಳಿಗೆ ಗೊತ್ತಾಗಲಿಲ್ಲ. ಅವರಿಗೆ ನನಗಿಂತಲೂ ಹೆಚ್ಚು ಸಿದ್ಧಿ ಇದೆ. ನನ್ನ ಮನಸ್ಸಿನ ಯೋಚನೆಯನ್ನು ಈತ ಅಳೆಯಲಿಕ್ಕೆ ಬರುತ್ತಿದ್ದಾನೆಂದು ನನಗಿಂತ ಮೊದಲೇ ಅರಿತುಕೊಂಡು ನನ್ನ ಸಿದ್ಧಿಯನ್ನು ಈತ ಕಳೆದುಹೋಗುವಂತೆ ಮಾಡಿಬಿಟ್ಟಿದ್ದಾರೆ ಎಂದು ಭಾವಿಸಿ ಕಾವ್ಯಕಂಠ ಮುನಿ ರಮಣರ ಕಾಲಿಗೆ ನಮಸ್ಕಾರ ಮಾಡಿ 'ನನ್ನದು ತಪ್ಪಾಯ್ತು, ನನ್ನನ್ನು ದಯವಿಟ್ಟು ಕ್ಷಮಿಸಿ' ಎಂದು ಕೇಳಿಕೊಂಡರು. ರಮಣರಾದರೋ ನಿರ್ಲಿಪ್ತವಾಗಿ ಮಲಗಿದ್ದರು. 'ನಾನು ನಿಮ್ಮನ್ನು ಪರೀಕ್ಷೆ ಮಾಡಲಿಕ್ಕೆ ಬರಬಾರದಾಗಿತ್ತು. ಹಾಗೆ ಬಂದು ನನ್ನ ಸಿದ್ಧಿಯನ್ನು ಕಳೆದುಕೊಂಡೆ. ನನ್ನ ಸಿದ್ಧಿಯನ್ನು ನನಗೆ ಹಿಂದಿರುಗಿಸುವ ಕೃಪೆ ಮಾಡಿದರೆ ಹೊರಟು ಹೋಗುತ್ತೇನೆ. ಇನ್ನೆಂದೂ ಇಲ್ಲಿಗೆ ಬರುವುದಿಲ್ಲ' ಎಂದು ಕಾವ್ಯಕಂಠ ಗಣಪತಿಗಳು ದೈನ್ಯರಾಗಿ ಬೇಡಿಕೊಂಡರು.

ರಮಣರು ಹಾಗೇ ಒಂದು ಕ್ಷಣ ದಿಟ್ಟಿಸಿ ನೋಡಿ. ಒಂದು ಮಾತು ನುಡಿದರಂತೆ: `You could read really thought, if there is a thought'.

ಗಣಪತಿ ಮುನಿಗೆ ಆಶ್ಚರ್ಯವಾಗುತ್ತದೆ. 'ಮನಸ್ಸು ಇಲ್ಲದ ಒಂದು ಸ್ಥಿತಿಯೂ ಉಂಟೇ?' ನನ್ನ ಇಷ್ಟು ದಿನದ ಸಾಧನೆ, ಸಿದ್ಧಿ, ತಪಸ್ಸು ಎಲ್ಲವೂ ಮನಸ್ಸೊಂದಿದೆ, ಯೋಚನೆಯೊಂದಿದೆ ಎನ್ನುವುದರ ಮೇಲೆ ನಿಂತಿದೆ ಅಲ್ಲವೇ" ಎಂದು ತಮಗೆ ತಾವೇ ಪ್ರಶ್ನಿಸಿಕೊಂಡು ಎಲ್ಲ ಕಡೆ ತಮ್ಮ ವಿದ್ವತ್ತು, ಸಿದ್ಧಿಗಳಿಂದ ಜಯಭೇರಿ ಹೊಡೆದುಕೊಂಡು ಬಂದಿದ್ದ ಕಾವ್ಯಕಂಠ ಮುನಿಗಳು ರಮಣರ ಅನುಯಾಯಿಯಾಗಿ ರಮಣಾಶ್ರಮದಲ್ಲಿಯೇ ಇದ್ದುಬಿಟ್ಟರು. ರಮಣರನ್ನು 'ಭಗವಾನ್ ರಮಣ ಮಹರ್ಷಿ' ಎಂದೇ ಭಾವಿಸಿದರು.

1950ರಲ್ಲಿ ಇವರ ಮೊಣಕೈಯಲ್ಲಿ ಆದ ಗಂಟುಗಳು ಇವರನ್ನು ಬಾಧಿಸತೊಡಗಿತು. ದೇಶದ ಪ್ರಸಿದ್ಧ ವೈದ್ಯರು ಇವರ ಮೊಣಕೈಯನ್ನು ನಾಲ್ಕು ಬಾರಿ ಶಸ್ತ್ರಚಿಕಿತ್ಸೆಗೆ ಒಳಪಡಿಸಿದರು. ಆದರೂ ಯಾವುದೇ ಗುಣ ಕಾಣಲಿಲ್ಲ. ಉಲ್ಬಣಗೊಳ್ಳುತ್ತ ಹೋಯಿತು. ಮಹರ್ಷಿಗಳು ದಿನದಿಂದ ದಿನಕ್ಕೆ ಕೃಶರಾಗುತ್ತ ಸಾಗಿದರು. ಯಾತನೆ ಜಾಸ್ತಿಯಾಯಿತು ಆದರೂ ಇವರ ಮುಖ ಮಾತ್ರ ಶಾಂತವಾಗಿಯೇ ಇರುತ್ತಿತ್ತು. ಯಾವ ಯಾತನೆಯೂ ಇಲ್ಲವೇನೋ ಎಂಬಂತೆ ಶಾಂತವಾಗಿ ಮಲಗಿರುತ್ತಿದ್ದರು.

14 ಏಪ್ರಿಲ್ 1950ರಂದು ಭಗವಾನ್ ರಮಣರು ತಮ್ಮ ದೇಹವನ್ನು ತ್ಯಾಗ ಮಾಡಿದರು.

## ಭಾರತೀಯ ದರ್ಶನ

ಪುಸ್ತಕ ಪರಿಚಯ




**ಮೂಲ ಲೇಖಕರು: ಪಂಡಿತ ಬಲದೇವ ಉಪಾಧ್ಯಾಯ**
**ಅನುವಾದ: ಎಸ್. ರಾಮಚಂದ್ರಶಾಸ್ತ್ರೀ**

ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ ಮೂವತ್ತೆಂಟು ವರ್ಷ ಕೆಲಸಮಾಡಿದ್ದ ಪಂ. ಬಲದೇವ ಉಪಾಧ್ಯಾಯರು 1942ರಲ್ಲಿ ರಚಿಸಿದ ಗ್ರಂಥ ಭಾರತೀಯ ದರ್ಶನ. ಉತ್ತರ ಭಾರತದ ಹಲವು ವಿಶ್ವವಿದ್ಯಾಲಯಗಳಲ್ಲಿ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿದ್ದ ಈ ಗ್ರಂಥವನ್ನು ಕನ್ನಡಕ್ಕೆ ತಂದವರು ಎಸ್. ರಾಮಚಂದ್ರಶಾಸ್ತ್ರಿಗಳು. ಮೊದಲು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದ್ದ ಈ ಕೃತಿಯು, ತನಂತರದ ದಿನಗಳಲ್ಲಿ ವಿಶ್ವವಿದ್ಯಾಲಯದವರ ಅವಜ್ಞೆಗೆ ಗುರಿಯಾಗಿ, ಅಲಭ್ಯವಾಗಿತ್ತು. ಇತ್ತೀಚೆಗೆ, ಅನುವಾದಕರ ಮುತುವರ್ಜಿಯಿಂದ ಮತ್ತೆ ಪ್ರಕಟವಾಗಿ, ಆಸಕ್ತರಿಗೆ ದೊರೆಯುವಂತಾಗಿದೆ.

ಶ್ರೌತದರ್ಶನ, ಗೀತಾದರ್ಶನ, ಚಾರ್ವಾಕದರ್ಶನ, ಜೈನದರ್ಶನ, ಬೌದ್ಧದರ್ಶನಗಳ ಜತೆಗೆ ನ್ಯಾಯ–ವೈಶೇಷಿಕ–ಸಾಂಖ್ಯ–ಯೋಗ–ಮೀಮಾಂಸಾ–ಅದ್ವೈತ ವೇದಾಂತ–ವೈಷ್ಣವ ದರ್ಶನಗಳ ವಿವರವಾದ ಪರಿಚಯ ಈ ಗ್ರಂಥದಲ್ಲಿದೆ. ಇಷ್ಟೇ ಅಲ್ಲದೆ, ವೈಷ್ಣವ ತಂತ್ರ, ಶೈವ–ಶಾಕ್ತ ತಂತ್ರಗಳನ್ನೂ ವಿಸ್ತಾರವಾಗಿ ಪರಿಚಯಿಸುತ್ತ, ಕೊನೆಯಲ್ಲಿ ಪಾಶ್ಚಾತ್ಯ ದರ್ಶನದ ಸಂಕ್ಷಿಪ್ತ ಅವಲೋಕನವನ್ನೂ ಮಾಡಲಾಗಿದೆ.

ಭಾರತೀಯ ತತ್ತ್ವಶಾಸ್ತ್ರವನ್ನು ಅತ್ಯಂತ ಸರಳವಾಗಿ ಪರಿಚಯಿಸುವ ಮಹತ್ತ್ವದ ಕೃತಿ ಇದು. 816 ಪುಟಗಳ ಬೈಂಡಿಂಗ್ ಇರುವ ಈ ಗ್ರಂಥದ ಬೆಲೆ ರೂ. 800.00. ಆಸಕ್ತರು ಭಾರತೀಯ_ದರ್ಶನ ಗ್ರಂಥವನ್ನು ಖರೀದಿಸಲು WhatsApp ಮಾಡಿ: +917483681708.

## ಎಲ್ಲೋ ಕೇಳಿದ ಕಥೆ

ಒಮ್ಮೆ ಒಬ್ಬ ಯುವಕ ಬೆಟ್ಟದ ಮೇಲೆ ಇರುತ್ತಿದ್ದ ಝೆನ್ ಗುರುವನ್ನು ಪರೀಕ್ಷಿಸಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ಒಂದು ಪುಟ್ಟ ಹಕ್ಕಿಯನ್ನು ಮುಷ್ಟಿಯಲ್ಲಿ ಮುಚ್ಚಿಟ್ಟುಕೊಂಡು, ಬೆನ್ನ ಹಿಂದೆ ಕೈ ಕಟ್ಟಿಕೊಂಡು ಗುರುವಿನ ಬಳಿಗೆ ಹೋದನು.

ಗುರು ಒಂದು ವೇಳೆ ಹಕ್ಕಿ ಬದುಕಿದೆ ಅಂದರೆ ಹಾಗೇ ಹಕ್ಕಿಯ ಕತ್ತು ಹಿಸುಕಿ ಕೊಂದುಬಿಡುವುದಾಗಿಯೂ, ಸತ್ತಿದೆ ಅಂದರೆ ಹಕ್ಕಿಯನ್ನು ಮುಷ್ಟಿ ತೆರೆದು ಹಾರಿಬಿಡುವುದಾಗಿಯೂ ಅವನು ಆಲೋಚಿಸಿ, "ಗುರುವೇ! ನನ್ನ ಕೈಯೊಳಗೆ ಇರುವ ಹಕ್ಕಿ ಬದುಕಿದೆಯೋ, ಸತ್ತಿದೆಯೋ?" ಎಂದು ಕೇಳಿದನು.

ಯುವಕನ ಮುಖವನ್ನು ಶಾಂತವಾಗಿ ದಿಟ್ಟಿಸಿದ ಗುರು, "ಉತ್ತರ ನಿನ್ನ ಕೈಯಲ್ಲೇ ಇದೆ!" ಎಂದು ಮುಗುಳ್ನಕ್ಕನು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ, ಅರುಣ್ ಕಿರಿಮಂಜೇಶ್ವರ

# ಸಾಲುದ್ದದ ಸುದ್ದಿಗಳು

ಕೇಂದ್ರ ಚುನಾವಣಾ ಆಯೋಗವು ವಲಸಿಗ ಮತದಾರರನ್ನು ದೃಷ್ಟಿಯಲ್ಲಿಟ್ಟುಕೊಂಡು, ವಲಸಿಗರು ತಾವಿರುವ ಸ್ಥಳದಿಂದಲೇ ಮತದಾನ ಮಾಡಬಹುದಾದ ವಿನೂತನ ದೂರನಿಯಂತ್ರಿತ ವಿದ್ಯುನ್ಮಾನ ಮತಯಂತ್ರದ (ಆರ್.ವಿ.ಎಂ.) ಮಾದರಿಯನ್ನು ಅಭಿವೃದ್ಧಿ ಪಡಿಸಿದೆ. ಈ ರಿಮೋಟ್ ವೋಟಿಂಗ್ ಮಷೀನ್ (ಆರ್.ವಿ.ಎಂ.) ಕಾರ್ಯಶೈಲಿ ಕುರಿತು 8 ರಾಷ್ಟ್ರೀಯ ಮತ್ತು 57 ಪ್ರಾದೇಶಿಕ ರಾಜಕೀಯ ಪಕ್ಷಗಳಿಗೆ ಜನವರಿ 16 ರಂದು ಪ್ರಾತ್ಯಕ್ಷಿಕೆ ನೀಡಲಿದೆ.

2022–23ನೇ ಸಾಲಿನ ಯುಡೈಸ್ / ಸ್ಯಾಟ್ಸ್ ಅಂಕಿ ಅಂಶದ ಪ್ರಕಾರ ರಾಜ್ಯದ 75,675 ಸರ್ಕಾರಿ ಶಾಲಾ ಕೊಠಡಿಗಳಿಗೆ ದುರಸ್ತಿ ಅವಶ್ಯಕತೆ ಇದ್ದು, ಅವುಗಳ ದುರಸ್ತಿಗೆ 2682.03 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಪ್ರಸ್ತುತ ರಾಜ್ಯ ಸರ್ಕಾರ 18,618 ಶಾಲಾ ಕೊಠಡಿಗಳ ದುರಸ್ತಿ ಹಾಗೂ 8100 ಹೊಸ ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ 13 ಹೊಸ ನೀರಾವರಿ ಯೋಜನೆಗಳಿಗೆ ರಾಜ್ಯಸರ್ಕಾರ ಅನುಮೋದನೆ ನೀಡುವ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೂ ಮಹತ್ವ ನೀಡಿದೆ. ಒಟ್ಟಾರೆ ಯೋಜನಾ ವೆಚ್ಚ ರೂ.5515.30 ಕೋಟಿ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ವರ್ಷದ ಅಂತ್ಯದ ವೇಳೆಗೆ ಸೇವೆ ಸಲ್ಲಿಸದ 100 ವಿಮಾನ ನಿಲ್ದಾಣಗಳು, ಹೆಲಿಪೋರ್ಟ್‌ಗಳು ಮತ್ತು ವಾಟರ್ ಏರೋಡ್ರೋಮ್‌ಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರ ಕಾರ್ಯಪ್ರವೃತ್ತವಾಗಿದ್ದು 4500 ಕೋಟಿ ರೂಪಾಯಿಯ ಬಜೆಟ್‌ಗೆ ಅನುಮೋದನೆ ನೀಡಿದೆ. ಉಡೇ ದೇಶ್ ಕಾ ಆಮ್ ನಾಗರಿಕ್ – ಉಡಾನ್ ಯೋಜನೆಯಡಿ ಒಂದು ಸಾವಿರ ಮಾರ್ಗಗಳನ್ನು ಕಾರ್ಯಗತಗೊಳಿಸುವ ಗುರಿಯ ಭಾಗವಾಗಿ ಪುನಶ್ಚೇತನ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಕೇಂದ್ರ ಮಾಹಿತಿ ನೀಡಿದೆ.

2024ರ ವೇಳೆಗೆ ಪ್ರತಿ ಗ್ರಾಮೀಣ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸುವ ಗುರಿಯತ್ತ ಸರ್ಕಾರ ದಾಪುಗಾಲು ಇಡುತ್ತಿದೆ. ಜಲ ಶಕ್ತಿ ಸಚಿವಾಲಯದ ಅಡಿಯಲ್ಲಿನ ಜಲ ಜೀವನ್ ಮಿಷನ್ (ಜೆಜೆಎಂ) ಅಡಿ 55% ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರು ಸಂಪರ್ಕಗಳನ್ನು ಒದಗಿಸಲಾಗಿದೆ. ಯೋಜನೆಯ ಘೋಷಣೆಯ ಸಂದರ್ಭ ಶೇ.17 ರಷ್ಟು ಮನೆಗಳಿಗೆ ಮಾತ್ರ ನಲ್ಲಿ ನೀರಿನ ಸಂಪರ್ಕ ಇತ್ತು.


ರಾಜ್ಯದ 34 ಸಕ್ಕರೆ ಕಾರ್ಖಾನೆಗಳು 45 ಲಕ್ಷ ಲೀಟರ್ ಎಥೆನಾಲ್ ಉತ್ಪಾದಿಸಿವೆ. ಅಲ್ಲದೇ ಎಥೆನಾಲ್‌ನಂತಹ ಉಪ ಉತ್ಪನ್ನಗಳಿಂದ ಬರುವ ಲಾಭದ ಒಂದಿಷ್ಟು ಮೊತ್ತವನ್ನು ಕಬ್ಬು ರೈತರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಸಕ್ಕರೆ ಮತ್ತು ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರು ಹೇಳಿದ್ದಾರೆ. ಈ ಮೂಲಕ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಮಹತ್ವದ ಸಾಧನೆ ಮಾಡಿವೆ.

ಕಳೆದ ಎಂಟು ವರ್ಷಗಳಲ್ಲಿ ದೇಶದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸರ್ಕಾರ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಬುಡಕಟ್ಟು ಪ್ರದೇಶಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರವು 29 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ 650 ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ನಿರ್ಮಿಸಿದೆ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.



"ಭಾರತವು ತನ್ನ ಸಮುದ್ರಯಾನ ಮಿಷನ್ ಮೂಲಕ ಆಳವಾದ ಸಮುದ್ರ ಸಂಪನ್ಮೂಲಗಳನ್ನು ಅನ್ವೇಷಿಸಲು ಯೋಜಿಸುತ್ತಿದೆ. ಸಮುದ್ರಯಾನ ಮಿಷನ್ ಅಡಿಯಲ್ಲಿ, ಖನಿಜಗಳಂತಹ ಆಳವಾದ ಸಮುದ್ರ ಸಂಪನ್ಮೂಲಗಳ ಅನ್ವೇಷಣೆಗಾಗಿ ಭಾರತವು 'ಮತ್ಸ್ಯ 6000' ಎಂಬ ವಾಹನದಲ್ಲಿ 6,000 ಮೀಟರ್ ಆಳಕ್ಕೆ ಮೂವರು ಸಿಬ್ಬಂದಿಯನ್ನು ಕಳುಹಿಸುತ್ತಿದೆ. ಮಿಷನ್ 2026ರ ವೇಳೆಗೆ ಸಾಕಾರಗೊಳ್ಳುವ ನಿರೀಕ್ಷೆಯಿದೆ" ಎಂದು ಕೇಂದ್ರ ಭೂ ವಿಜ್ಞಾನ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಯಲ್ಲಿ ತಿಳಿಸಿದ್ದಾರೆ.

ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ)ಯು ಸಶಸ್ತ್ರ ಪಡೆಗಳು ಮತ್ತು ಭಾರತೀಯ ಕರಾವಳಿ ಕಾವಲು ಪಡೆಗಳಿಗೆ 84,328



ಕೋಟಿ ರೂಪಾಯಿ ಮೌಲ್ಯದ 24 ಪ್ರಮುಖ ಶಸ್ತ್ರಾಸ್ತ್ರ ಖರೀದಿ ಪ್ರಸ್ತಾವನೆಗಳನ್ನು ಅನುಮೋದಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆದ ಡಿಎಸಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಉಪಕ್ರಮವು ಸಶಸ್ತ್ರ ಪಡೆಗಳನ್ನು ಆಧುನೀಕರಿಸುತ್ತದೆ ಮತ್ತು 'ಆತ್ಮನಿರ್ಭರ ಭಾರತ' ಗುರಿಯನ್ನು ಸಾಧಿಸುವಲ್ಲಿ ರಕ್ಷಣಾ ಉದ್ಯಮಕ್ಕೆ ಗಣನೀಯ ಉತ್ತೇಜನವನ್ನು ನೀಡುತ್ತದೆ.

ಹೆಣ್ಣುಮಕ್ಕಳಿಗೆ ಆತ್ಮರಕ್ಷಣೆಗೆ ಅಲ್ಪಾವಧಿ ಕೋರ್ಸುಗಳ ಪ್ರಾರಂಭಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ. ಎಲ್ಲಾ ಶಿಕ್ಷಣ ಸಂಸ್ಥೆಗಳು ಅಲ್ಪಾವಧಿ ಕೋರ್ಸುಗಳನ್ನು ಕಲಿಸುವ ಅವಶ್ಯಕತೆ ಇದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಯೋಗದೊಂದಿಗೆ ಹೆಣ್ಣುಮಕ್ಕಳಿಗೆ ಆತ್ಮರಕ್ಷಣೆಗೆ ಅಲ್ಪಾವಧಿ ಕೋರ್ಸುಗಳನ್ನು ಕೂಡ ಪಿಯುಸಿ ಹಂತದಿಂತ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಡಿಸೆಂಬರ್ 2023ರವರೆಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಉಚಿತ ಆಹಾರ ಧಾನ್ಯಗಳನ್ನು ಒದಗಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಇದರಿಂದ ದೇಶದ 81.35 ಕೋಟಿ ಬಡವರಿಗೆ ಒಂದು ವರ್ಷದವರೆಗೆ ಉಚಿತ ಪಡಿತರ ಸಿಗಲಿದೆ. ಆಹಾರ ಭದ್ರತಾ ಕಾಯ್ದೆ ಅಡಿಯಲ್ಲಿ ಕೇಂದ್ರ ಸರ್ಕಾರ ಪ್ರಸ್ತುತ ಪ್ರತಿ ವ್ಯಕ್ತಿಗೆ ಐದು ಕೆಜಿ ಆಹಾರ ಧಾನ್ಯಗಳನ್ನು ಪ್ರತಿ ಕೆಜಿಗೆ 2–3 ರೂ. ಗೆ ಒದಗಿಸುತ್ತಿದೆ.

2035ರ ವೇಳೆಗೆ ಭಾರತವು ಪ್ರಸ್ತುತ ಐದನೇ ಸ್ಥಾನದಿಂದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಬ್ರಿಟಿಷ್ ಸಲಹಾ ಸಂಸ್ಥೆಯಾದ ಸೆಂಟರ್ ಫಾರ್ ಎಕನಾಮಿಕ್ಸ್ ಅಂಡ್ ಬಿಸಿನೆಸ್ ರಿಸರ್ಚ್ (CEBR) ಹೇಳಿದೆ. ವರದಿಯ ಪ್ರಕಾರ ಮುಂದಿನ ಐದು ವರ್ಷಗಳಲ್ಲಿ, ಭಾರತದ ವಾರ್ಷಿಕ ಜಿಡಿಪಿ ಬೆಳವಣಿಗೆಯ ದರವು ಸರಾಸರಿ 6.4 ಶೇಕಡಾವನ್ನು ನಿರೀಕ್ಷಿಸಲಾಗಿದೆ ಮತ್ತು ನಂತರದ ಒಂಬತ್ತು ವರ್ಷಗಳಲ್ಲಿ ಬೆಳವಣಿಗೆಯು ಸರಾಸರಿ 6.5 ಶೇಕಡಾವನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದೆ.

ಉತ್ತರಪ್ರದೇಶದಲ್ಲಿ ಅತಿದೊಡ್ಡ ಅತ್ಯಾಧುನಿಕ ಗೋಶಾಲೆ ಸ್ಥಾಪನೆಯಾಗಲಿದೆ. 800 ಬಿಘಾ ಭೂಮಿಯಲ್ಲಿ ಸುಮಾರು 70 ಕೋಟಿ ರೂಪಾಯಿ ವೆಚ್ಚದಲ್ಲಿ 5,000 ಕ್ಕೂ ಹೆಚ್ಚು ಬಿಡಾಡಿ ದನಗಳನ್ನು ಸಾಕುವ ಸಾಮರ್ಥ್ಯವನ್ನು ಈ ಗೋಶಾಲೆ ಹೊಂದಲಿದೆ. ಈ ಉದ್ದೇಶಿತ ಗೋವು ಅಭಯಾರಣ್ಯವು ಮುಜಾಫರ್ನಗರ ಜಿಲ್ಲೆಯ ಚಿಂದನ್ ಗ್ರಾಮದ ಸೋಲಾನಿ ನದಿಯ ದಡದಲ್ಲಿ ಸ್ಥಾಪನೆಯಾಗಲಿದೆ ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಖಾತೆ ರಾಜ್ಯ ಸಚಿವ ಸಂಜೀವ್ ಬಲ್ಯಾನ್ ಅವರು ಘೋಷಿಸಿದ್ದಾರೆ.

ಈ ಹಣಕಾಸು ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ನಡುವೆ ಭಾರತದ ಫಾರ್ಮ್ ಟ್ರ್ಯಾಕ್ಟರ್‌ಗಳ ರಫ್ತು 2.75 ಪಟ್ಟು ಹೆಚ್ಚಾಗಿದೆ. ಏಪ್ರಿಲ್–ಅಕ್ಟೋಬರ್ 2013–14ರಲ್ಲಿ, ಭಾರತದಿಂದ ಫಾರ್ಮ್ ಟ್ರ್ಯಾಕ್ಟರ್‌ಗಳ ರಫ್ತು 2,760 ಕೋಟಿ ರೂಪಾಯಿಗಳಷ್ಟಿತ್ತು, ಇದು ಏಪ್ರಿಲ್–ಅಕ್ಟೋಬರ್ 2022–23ರಲ್ಲಿ 7,613 ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಟ್ವೀಟರ್‌ನಲ್ಲಿ ಮಾಹಿತಿ ನೀಡಿದ್ದಾರೆ.



2036ರಲ್ಲಿ ಒಲಿಂಪಿಕ್ ಕ್ರೀಡಾಕೂಟದ ಆತಿಥ್ಯಕ್ಕಾಗಿ ಭಾರತ ಬಿಡ್ ಮಾಡಲಿದೆ. 2023ರ ಸೆಪ್ಟೆಂಬರ್‌ನಲ್ಲಿ ಮುಂಬೈನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಎ) ಯ ಅಧಿವೇಶನದಲ್ಲಿ ಅದರ ಪೂರ್ಣ ಸದಸ್ಯರ ಮುಂದೆ ಸರ್ಕಾರ ಮಾರ್ಗಸೂಚಿಯನ್ನು ಪ್ರಸ್ತುತಪಡಿಸುತ್ತದೆ ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಹೇಳಿದ್ದಾರೆ.

ಜನವರಿ 26 ರಂದು ವಸಂತ ಪಂಚಮಿಯಿಂದ ದೇಶಾದ್ಯಂತ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ಭಾರತೀಯ ಇತಿಹಾಸದ ತಿದ್ದುಪಡಿ ಆವೃತ್ತಿಯನ್ನು ಕಲಿಸಲಾಗುವುದು. ಹೊಸ ಸಂಯೋಜನೆಗಳೊಂದಿಗೆ ಪುಸ್ತಕಗಳನ್ನು ಮರು ಪ್ರಕಟಿಸಲಾಗುತ್ತಿದೆ ಮತ್ತು ಈ ಪುಸ್ತಕಗಳು ಭಾರತದ ಬಗ್ಗೆ ಜಗತ್ತಿಗೆ ಸ್ಪಷ್ಟತೆಯನ್ನು ನೀಡುತ್ತವೆ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ (ಐಸಿಎಚ್‌ಆರ್) ಮತ್ತು ಅಖಿಲ ಭಾರತೀಯ ಇತಿಹಾಸ ಸಂಕಲನ ಯೋಜನೆ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

ಈ ವರ್ಷ ದೇಶವು ಟಿಬಿ ಪ್ರಕರಣಗಳಲ್ಲಿ 18 ಪ್ರತಿಶತದಷ್ಟು ಕಡಿತವನ್ನು ಕಂಡಿದೆ. 2025ರ ವೇಳೆಗೆ ಭಾರತದಲ್ಲಿ ಕ್ಷಯರೋಗವನ್ನು ಕೊನೆಗೊಳಿಸುವುದು ಸರ್ಕಾರದ ದೃಷ್ಟಿಯಾಗಿದ್ದು, ಸುಸ್ಥಿರ ಅಭಿವೃದ್ಧಿ ಗುರಿಗಿಂತ ಐದು ವರ್ಷಗಳ ಮುಂಚಿತವಾಗಿ ಗುರಿ ಸಾಧನೆ ಕೇಂದ್ರ ಸರ್ಕಾರದ ಬದ್ಧತೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ.ಮನ್ಸುಖ್ ಮಾಂಡವೀಯಾ ತಿಳಿಸಿದ್ದಾರೆ.

ಜಾಗತಿಕ ತಲೆನೋವಾಗಿ ಪರಿಣಮಿಸಿರುವ ಭಯೋತ್ಪಾದನಾ ಕೃತ್ಯಗಳಿಗೆ ಆರ್ಥಿಕ ಮೂಲವಾಗಿರುವ ಟೆರರ್ ಫಂಡಿಂಗ್‌ಗೆ ಅಂಕುಶವನ್ನು ಹಾಕಲು ಕೇಂದ್ರ ಸರ್ಕಾರ ಪಣತೊಟ್ಟಿದೆ. ಪ್ರತ್ಯೇಕ ಸಚಿವಾಲಯ ಸ್ಥಾಪನೆ ಹಾಗೂ ಅಂತರಾಷ್ಟ್ರೀಯ ಖೈದಿಗಳ ಆಸ್ತಿ ಜಪ್ತಿ ಮಾಡಲು ಸಿಲ್ವರ್ ನೋಟಿಸ್ ಅಸ್ತ್ರ ಪ್ರಯೋಗಿಸಲು ಸಿದ್ಧತೆ ನಡೆಸಿದೆ. ಅಷ್ಟೇಯಲ್ಲದೆ ಮಿತ್ರ ರಾಷ್ಟ್ರಗಳೊಂದಿಗೆ ಭಯೋತ್ಪಾದಕ ಘಟನೆಗಳ ಮಾಹಿತಿ ವಿನಿಮಯಕ್ಕೂ ಸರ್ಕಾರ ಸಿದ್ಧವಾಗಿದ್ದು ಸಂಘಟಿತವಾಗಿ ಭಯೋತ್ಪಾದನೆಯ ವಿರುದ್ಧ ರಣತಂತ್ರ ರೂಪಿಸಲು ನಿರ್ಧರಿಸಿದೆ.

ಯೋಗವನ್ನು ಜಗತ್ತಿನ ಜನ ಮುಕ್ತಕಂಠದಿಂದ ಒಪ್ಪಿಕೊಂಡಿರುವ ಈ ಸಂದರ್ಭದಲ್ಲಿ ಮುಂಬೈನ ಟಾಟಾ ಸ್ಮಾರಕ ಕೇಂದ್ರದ ಸಂಶೋಧನೆಯೊಂದು ಯೋಗದ ಮಹತ್ವವನ್ನು ಹೆಚ್ಚಿಸಿದೆ. ರಾಷ್ಟ್ರದಲ್ಲಿ ವಾರ್ಷಿಕವಾಗಿ 90000 ಮಹಿಳೆಯರ ಸಾವಿಗೆ ಕಾರಣವಾಗುತ್ತಿರುವ ಸ್ತನ ಕ್ಯಾನ್ಸರ್ಗೆ ಯೋಗ ಮದ್ದಾಗಿದೆ. ಚಿಕಿತ್ಸೆಯೊಂದಿಗೆ ಯೋಗವನ್ನು ಜೋಡಿಸಿದ್ದು ಶೇ.15ರಷ್ಟು ಮರಣಪ್ರಮಾಣವನ್ನು ಮತ್ತು ರೋಗ ಮರುಕಳಿಸುವ ಪ್ರಮಾಣವನ್ನು ತಗ್ಗಿಸಿದೆ ಎನ್ನುವುದನ್ನು ತಿಳಿಸಿದೆ.



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JANUARY 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-1-2023



## ಜ್ಞಾನ, ಸೇವೆ, ಕರುಣೆ, ಪ್ರೀತಿಗಳ ಸಾಕಾರಮೂರ್ತಿ ಶ್ರೀ ಸಿದ್ದೇಶ್ವರ ಸ್ವಾಮಿಗಳು – ದತ್ತಾತ್ರೇಯ ಹೊಸಬಾಳೆ



**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಹಾಗು ಕ್ಷೇತ್ರೀಯ ಸಂಘಚಾಲಕರಾದ ಶ್ರೀ ವಿ.ನಾಗರಾಜ ಅವರು ಅಗಲಿದ ಹಿರಿಯ ಸಂತ ವಿಜಾಪುರದ ಜ್ಞಾನ ಯೋಗಾನಂದಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

"ಇಂದು ದೇವಲೋಕಕ್ಕೆ ತೆರಳಿದ ವಿಜಯಪುರದ ಜ್ಞಾನ ಯೋಗಾಶ್ರಮದ ಪರಮ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಪುಣ್ಯ ಸ್ಮೃತಿಗೆ ಶ್ರದ್ಧಾಪೂರ್ವಕ ನಮನಗಳು. ಜನತೆಯು ಪೂಜ್ಯಶ್ರೀಗಳನ್ನು ನಡೆದಾಡುವ ದೇವರೆಂದೇ ಭಕ್ತಿ ತೋರಿತು. ಆಧ್ಯಾತ್ಮಿಕ ಸಾಧನೆಯ ಶಿಖರವೇರಿದ, ಜನರು ನೈತಿಕ ಹಾಗೂ ಧಾರ್ಮಿಕವಾಗಿ ಉನ್ನತಿಗೇರುವಂತೆ ಸತತವಾಗಿ ಬೆಳಕು ನೀಡಿದ ಸಾತ್ವಿಕ ದೀಪ ಆರಿಹೋಯಿತು. ಇಡೀ ನಾಡೇ ಇಂದು ಕಂಬನಿ ಹರಿಸುತ್ತಿದೆ. ಅಸಂಖ್ಯ ಜನರಿಗೆ ಧರ್ಮದೀಕ್ಷೆಯನ್ನೂ ಕರ್ತವ್ಯಬೋಧೆಯನ್ನೂ ನೀಡಿದ್ದ ಅವರ ಜೀವನ ಸಂದೇಶವು ಚಿರಕಾಲ ಸನ್ಮಾರ್ಗದಲ್ಲಿ ನಡೆಯಲು ಪ್ರೇರಣೆ ನೀಡುತ್ತದೆ. ಜ್ಞಾನ, ಸೇವೆ, ಕರುಣೆ, ಪ್ರೀತಿಗಳ ಸಾಕಾರಮೂರ್ತಿಯಾಗಿದ್ದ ಜ್ಞಾನಯೋಗಾಶ್ರಮದ ಸಂತರ ಪಾವನ ಸ್ಮೃತಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತ ಶತ ನಮನಗಳು.

ಶಿವಾಯ ನಮಃ"

– **ದತ್ತಾತ್ರೇಯ ಹೊಸಬಾಳೆ,** ಸರಕಾರ್ಯವಾಹ,
ರಾಷ್ಟ್ರೀಯ ಸ್ವಯಂಸೇವಕ ಸಂಘ

– **ವಿ.ನಾಗರಾಜ,** ಕ್ಷೇತ್ರೀಯ ಸಂಘಚಾಲಕರು,
ರಾಷ್ಟ್ರೀಯ ಸ್ವಯಂಸೇವಕ ಸಂಘ

## ಸಿದ್ದೇಶ್ವರ ಸ್ವಾಮಿಗಳ ನುಡಿ ಸ್ವಯಂಸೇವಕರಿಗೆ ಸದಾ ಪ್ರೇರಣಾದಾಯಿ – ಪ್ರಾಂತ ಸಂಘಚಾಲಕ ಖಗೇಶ್ವರನ್ ಪಟ್ಟಣಶೆಟ್ಟಿ

**ಹುಬ್ಬಳ್ಳಿ:** ಇತ್ತೀಚೆಗೆ ನಮ್ಮನ್ನಗಲಿದ ವಿಜಾಪುರದ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ಸಂಘಚಾಲಕರಾದ ಖಗೇಶ್ವರನ್ ಪಟ್ಟಣಶೆಟ್ಟಿ ಅವರು ಸಂತಾಪ ಸೂಚಿಸಿದ್ದಾರೆ.

"ಪರಮಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ವೈಕುಂಠ ಏಕಾದಶಿಯಂದು ಶಿವಾಧೀನರಾದ ವಿಷಯ ತಿಳಿದು ನಮಗೆ ಹಾಗೂ ರಾಜ್ಯದ ಹಾಗೂ ದೇಶದ ಜನರಿಗೆ ತೀವ್ರ ದುಃಖವನ್ನು ಉಂಟುಮಾಡಿದೆ. ಪೂಜ್ಯ ಸ್ವಾಮಿಗಳು ತಮ್ಮ ಸರಳ ಜೀವನ ಹಾಗೂ ಅದ್ಭುತವಾದ ಉಪನ್ಯಾಸದ ಮೂಲಕ ನಾಡಿನ ಜನರ ಮನಸ್ಸಿನಲ್ಲಿ ಗೌರವದ ಸ್ಥಾನವನ್ನು ಪಡೆದಿದ್ದಾರೆ. ಅವರ ಉಪನ್ಯಾಸದಿಂದ ಪ್ರೇರಣೆಯನ್ನು ಪಡೆದು ಅನೇಕರು ತಮ್ಮ ಜೀವನದಲ್ಲಿ ಅದ್ಭುತ ಸಾಧನೆಯನ್ನು ಮಾಡಿದ್ದಾರೆ. ಹಳ್ಳಿಯ ಕೃಷಿಕರು, ಕಾರ್ಮಿಕರನ್ನು ಒಳಗೊಂಡು ದೇಶದ ಅನೇಕ ಮೇಧಾವಿಗಳ ಜೀವನದ ಮೇಲೆ ಪೂಜ್ಯರು ಪ್ರಭಾವವನ್ನು ಬೀರಿದ್ದಾರೆ.

ಪೂಜ್ಯರು ಕೆಲವೇ ದಿನಗಳ ಹಿಂದೆ ತಮ್ಮ ದರ್ಶನಕ್ಕೆ ಬಂದಿದ್ದ ಸಂಘದ ಸರಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆಯವರಿಗೆ ಆಶೀರ್ವಾದ ಪೂರ್ವಕವಾಗಿ ನುಡಿದ 'ನೀವು ಸಂಘದ ಕಾರ್ಯಕರ್ತರು ಅಪಾರ ಪರಿಶ್ರಮಿಗಳು ಹಾಗೂ ಸದಾ ಉತ್ಸಾಹಿಗಳು' ಎಂಬ ಎರಡು ನುಡಿಮುತ್ತುಗಳು ಸಂಘದ ಎಲ್ಲ ಕಾರ್ಯಕರ್ತರಿಗೆ ಸದಾ ಪ್ರೇರಣಾದಾಯಿ. ಅವರ ಅಗಲುವಿಕೆ ಎಲ್ಲಾ ಆಸ್ತಿಕ ಭಕ್ತರಿಗೂ ಭರಿಸಲಾರದ ದುಃಖವನ್ನು ತಂದಿದೆ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಅವರ ಪವಿತ್ರಾತ್ಮಕ್ಕೆ ಭಕ್ತಿ ಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.

ಓಂ ಶಾಂತಿಃ ಶಾಂತಿಃ ಶಾಂತಿಃ"

– **ಖಗೇಶನ್ ಪಟ್ಟಣಶೆಟ್ಟಿ,** ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ

## ಜಗತ್ತು ಪರ್ಯಾಯ ಮಾದರಿಗಳನ್ನು ಹುಡುಕುತ್ತಿದೆ, ಅದು ಭಾರತದಲ್ಲಿದೆ – ವಿ. ನಾಗರಾಜ

**ಬೆಂಗಳೂರು:** "ಜಗತ್ತು ಪರ್ಯಾಯ ಮಾದರಿಗಳನ್ನು ಹುಡುಕುತ್ತಿದೆ– ಅದು ಭಾರತದಲ್ಲಿದೆ" ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ ವಿ. ನಾಗರಾಜ ಅವರು ಹೇಳಿದರು. ಅವರು ಕರ್ನಾಟಕ ಹೈಯರ್ ಎಜುಕೇಶನ್ ಕೌನ್ಸಿಲ್ನ ಸಭಾಂಗಣದಲ್ಲಿ ಐಸಿಸಿಆರ್, ಪ್ರಜ್ಞಾ ಪ್ರವಾಹ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಕರ್ನಾಟಕ ಹಾಗೂ ಕೇಂದ್ರ ಸರಕಾರದ ಸಹಯೋಗದಲ್ಲಿ ನಡೆಯುತ್ತಿರುವ 'ಸ್ವರಾಜ್




– ನೇಟಿವ್ ಮಾಡಲ್ಸ್ ಫಾರ್ ಸೆಲ್ಫ್ ಗೌವರ್ನೆನ್ಸ್'ನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಅವರು ಮಾತನಾಡುತ್ತಾ "ಸ್ವರಾಜ್ಯ ಎನ್ನುವುದು ವೇದ ಕಾಲದಿಂದಲೂ ನಡೆಯುತ್ತಾ ಬಂದಿದೆ. ಇನ್ನು ಶಿವಾಜಿ ಮಹಾರಾಜರು ಇದನ್ನು ಉಪಯೋಗಿಸುತ್ತಾ 'ಹಿಂದವಿ ಸ್ವರಾಜ್ಯ' ಎಂದರು. ಮಹಾತ್ಮ ಗಾಂಧಿಯವರು, ಯೋಗಿ ಅರವಿಂದರೂ ಸಹ ಈ ಬಗೆಗೆ ಅತ್ಯಂತ ಗಹನವಾಗಿ ಚರ್ಚೆ ನಡೆಸಿದ್ದರು. ಸ್ವರಾಜ್ಯ ಎನ್ನುವುದರ ಕುರಿತು ಮಾತನಾಡುವಾಗ ಪಾಶ್ಚಿಮಾತ್ಯ ಮಾದರಿಯಲ್ಲೇ ಯೋಚನೆಗಳಲ್ಲೇ ಮಾತನಾಡುತ್ತಿದ್ದೆವೆ. ಈ ಪಾಶ್ಚಿಮಾತ್ಯ ಮಾದರಿಗಳು 'anthropocentric' ಆಗಿದೆ, ಅಂದರೆ ಮಾನವಕೇಂದ್ರಿತವಾದ ಯೋಚನೆಯಾಗಿದೆ, ಇಲ್ಲಿ ಜೀವ ಕೇಂದ್ರಿತವಾದ ಯೋಚನೆಗಳಿಲ್ಲ. ಆದರೆ ಭಾರತದ್ದು ಜೀವಕೇಂದ್ರಿತವಾದ ವಿಚಾರ. ಆದರೆ ಇತ್ತೀಚೆಗೆ ನಾವು ಜೀವಕೇಂದ್ರಿತ ಚಿಂತನೆಯಿಂದ ನಿಧಾನವಾಗಿ ಅದರಿಂದ ದೂರವಾಗಿ ಬಂದಿದ್ದೇವೆ. ಹಾಗಾಗಿಯೇ ಈ ಎಲ್ಲ ತೊಂದರೆಗಳಲ್ಲಿ ಸಿಲುಕಿಕೊಂಡಿದ್ದೇವೆ. ಜಗತ್ತು ಕೂಡ ಹೀಗೇ ಸಿಲುಕಿ ಹಾಕಿಕೊಂಡಿದೆ. ಜಗತ್ತು ಪರ್ಯಾಯ ಮಾದರಿಗಳನ್ನು ಹುಡುಕುತ್ತಿದೆ – ಅದು ಭಾರತದಲ್ಲಿದೆ. ಭಾರತಕ್ಕೆ ಈಗಾಗಲೇ ಇದಕ್ಕೊಂದು ಹಳೆಯ ಸಿದ್ಧ ಮಾದರಿಯಿದೆ, ಅದನ್ನು ಅಳವಡಿಸಿಕೊಳ್ಳಬೇಕಾಗಿದೆ" ಎಂದರು.

ಪರಿಚಯಾತ್ಮಕವಾಗಿ ಮಾತನಾಡಿದ ಪ್ರಜ್ಞಾ ಪ್ರವಾಹ ರಾಷ್ಟ್ರೀಯ ಸಹ ಸಂಯೋಜಕರಾದ ಶ್ರೀ ರಘುನಂದನ "ಸ್ವರಾಜ್ – ಎನ್ನುವ ಶಬ್ದದಲ್ಲಿ, ಸ್ವ ಹಾಗೂ ರಾಜ್ಯ ಎನ್ನುವುದು ಮೂಲ. ರಾಜ್ಯ ಎನ್ನುವಾಗ ಸಾಮಾನ್ಯವಾಗಿ ರಾಜನಿಂದ ಎಂದು ಭಾವಿಸುತ್ತೇವೆ, ಅಲ್ಲಿ ಆಳುವವನು ಇಲ್ಲ ಆಳುವಿಕೆ ಇದೆ. ಸ್ವ ಎಂದರೆ ನನ್ನತನ. ಪ್ರತಿಯೊಬ್ಬರಿಗೂ ಅವರದೇ ಆದಂತಹ ಸ್ವಂತ ಗಳಿಸಿದಂತಹ ಭಾವಗಳು ಮತ್ತು ಕೌಶಲ್ಯ ಇರುತ್ತದೆ. ಅದರ ಉನ್ನತೀಕರಣವೇ ಮೂಲ ಉದ್ದೇಶ. ಎಲ್ಲರೂ ಒಂದೇ ತರಹ ಆಗುವುದು ಉದ್ದೇಶವಲ್ಲ, ಬದಲಾಗಿ ಎಲ್ಲವೂ ತನ್ನದೇ ರೀತಿಯಲ್ಲಿ ವಿಕಾಸ ಹೊಂದುವುದು ಸಹಜ ಪ್ರಕ್ರಿಯೆ. ಆ ರೀತಿಯಲ್ಲಿ ವಿಕಾಸವಾಗಿದ್ದು ಚೈತನ್ಯವಾಗಿರುತ್ತದೆ. ಅದೇ ಸ್ವ. ಅದು ವ್ಯಕ್ತಿಗೆ ಹೇಗೋ ಸಮಾಜಕ್ಕೂ, ದೇಶಕ್ಕೂ ಇದೆ ಎಂದು ಅಭಿಪ್ರಾಯಪಟ್ಟರು.

ಇದೇ ಆಧಾರದ ಮೇಲೆ ಭಾರತದಲ್ಲಿ ಸ್ವಭಾವ ನಿರ್ಮಾಣವಾಯಿತು. ಅದು ಯೋಗಮುಖೇನ ಅಥವಾ ಇನ್ನಾವುದೇ ರೀತಿ ವ್ಯಕ್ತವಾಗುತ್ತಿದೆ. ಇದರ ಜೊತೆ ಈಗ ಭೋಗಯುಕ್ತ ಚಿಂತನೆಯೂ ಬಂದಿದೆ. ನಮ್ಮೊಳಗಿನ ರಿಸೋರ್ಸ್‌ಗಳನ್ನು ಉಪಭೋಗಿಸುವ ಕ್ಯಾಪಿಟಲಿಸ್ಟ್ ಚಿಂತನೆಗಳೂ ಬಂದಿದೆ. ಗ್ಲೋಬಲೈಸೇಶನ್ನಿನ ಪರಿಣಾಮಗಳು ಹೆಚ್ಚೆಚ್ಚು ನಡೆಯುತ್ತಿದೆ. 'ಮಿನಿಮಮ್ ಗವರ್ನಮೆಂಟ್, ಮ್ಯಾಕ್ಸಿಮಮ್ ಗೌವರ್ನೆನ್ಸ್' ಎನ್ನುವ ಮಾತನಾಡುತ್ತಿದ್ದೇವೆ. ಈ ಹಿಂದೆ ನಮ್ಮೂರಿನ ಜಲಮೂಲಗಳ ರಕ್ಷಣೆ ಮಾಡುತ್ತಿದ್ದವರು ಯಾರು? ಈಗ ಯಾರು? ಹಿಂದೆ ಅದರ ಪರಿಸ್ಥಿತಿ ಹೇಗಿತ್ತು? ಈಗ ಹೇಗಿದೆ? ಈ ಹಿಂದೆ ಆ ರೀತಿಯ ಸಾಮುದಾಯಿಕ ಕೆಲಸಗಳಿಗೆ, ಅದರ ಉಸ್ತುವಾರಿಗಳಿಗೆ ಪಂಚಾಯತಿ ವ್ಯವಸ್ಥೆ ಇತ್ತು. ಗೌರವದ ಕಾರಣದಿಂದ ಅದು ನಡೆಯುತ್ತಿತ್ತು. ಆದರೆ ನೇಷನ್ ಸ್ಟೇಟ್ಗಳು ಅಸ್ತಿತ್ವಕ್ಕೆ ಬಂದ ಮೇಲೆ ಈ ರೀತಿಯ ಪಂಚಾಯತಿ ಮಾಡೆಲ್‌ಗಳನ್ನು ಒತ್ತಡದಿಂದ ಅಳಿಸಲಾಯಿತು. ಇದರಿಂದ ನಮ್ಮ ಪಂಚಾಯತಿ ವ್ಯವಸ್ಥೆಗಳು ಹಾಳಾಯಿತು. ಇವತ್ತು ಆಧುನಿಕ ವ್ಯವಸ್ಥೆಗಳು ಹೆಚ್ಚಾಗಿದೆ, ಸುಖ ಹೆಚ್ಚಾಗಿದೆ, ಆದರೆ ಜೀವನದ ಗುಣಮಟ್ಟ ಕಡಿಮೆಯಾಗಿದೆ. ಕ್ಯಾಪಿಟಲಿಸಂ, ಸೋಷಿಯಲಿಸಂ ಎನ್ನುವ ಚಿಂತನೆಗಳು 'ರಿಸೋರ್ಸ್'ಗಳ ಒಡೆತನದ ಬಗ್ಗೆ ಮಾತನಾಡುತ್ತಿದೆ.

"ಪರಿವಾರ ಸಮಾಜದ ಮೊದಲ ಸೆಲ್ಫ್ ಗೌವರ್ನೆನ್ಸ್ ವ್ಯವಸ್ಥೆ. ಹೀಗೆ ನಮ್ಮನ್ನು ನಾವು ಆಳಿಕೊಳ್ಳುವ ವ್ಯವಸ್ಥೆಯು ಸಮಾಜದ ಎಲ್ಲಾ ಸ್ಥರಗಳಲ್ಲೂ ನಾವು ಕಾಣಬಹುದು. ಸಮಾಜದಲ್ಲಿ ಈ ವ್ಯವಸ್ಥೆಗಳನ್ನು ಯುಗಾನುಕೂಲ ವ್ಯವಸ್ಥೆಗಳಾಗಿ ರೂಪಿಸುವ ಬಗ್ಗೆ ಪ್ರಾಜ್ಞರು ಯೋಚಿಸಬೇಕಿದೆ. ಅಕಾಡೆಮಿಕ್ ಮತ್ತು ಅನುಭವಜನ್ಯವಾದ ವಿಚಾರಗಳೆರೆಡೂ ಕೂಡ ಕೂಡಿದಂತಹ, ಸಮಾಜದ ಎಲ್ಲ ಸ್ಥರದ ಪ್ರಾಜ್ಞರು, ತಜ್ಞರು ಒಟ್ಟಿಗೆ ಸೇರಿ ಚರ್ಚೆ ಮಾಡುವ, ಸಮಾಜದ ವಿನ್ಯಾಸಗಳನ್ನು ಪರಿಸ್ಥಿತಿಯ ಅನುಗುಣವಾಗಿ ರೂಪಿಸುವ ನಿಟ್ಟಿನಲ್ಲಿ ಚಿಂತನೆಗಳನ್ನು ನಡೆಸುವ ಸಲುವಾಗಿ ಈ ಸಮ್ಮೇಳನವನ್ನು ರೂಪಿಸಲಾಗಿದೆ" ಎಂದರು.

ಐಆರ್‌ಎಂಎಯ ನಿರ್ದೇಶಕರಾದ ಪ್ರೊ.ಉಮಾಕಾಂತ್ ದಾಶ್ ಅವರು ಮಾತನಾಡಿ, "ಗೌವರ್ನೆನ್ಸ್ ಅಥವಾ ಆಡಳಿತಕ್ಕೆ ಈ ಹಿಂದೆ ನಮ್ಮ ದೇಶದಲ್ಲಿ ಅತ್ಯಂತ ಉನ್ನತವಾದ ವ್ಯವಸ್ಥೆ ಇತ್ತು, ಆದರೆ ವಸಾಹತುಶಾಹಿಯ ಸಲುವಾಗಿ ಎಲ್ಲವನ್ನು ಕಳೆದುಕೊಳ್ಳಬೇಕಾಯಿತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ನಾವೀಗ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವ ಹಂತಕ್ಕೆ ಬಂದಿದ್ದೇವೆ. ಈಗ ನಮ್ಮ ವಿಶ್ವವಿದ್ಯಾಲಯಗಳೂ ಅದರ ಕುರಿತು ಮಾತನಾಡಲು ಆರಂಭಿಸಿದೆ. ನಮ್ಮಲ್ಲಿ ಈ ಕುರಿತು ಓದುವ ಎಲ್ಲರಿಗೂ ಗ್ರಾಮೀಣ ಪ್ರದೇಶಕ್ಕೆ ಕಳುಹಿಸುತ್ತಿದ್ದೇವೆ. ಸಮಾಜದ ಅನುಭವ ಪಡೆದ ಯುವ ವೃತ್ತಿಪರರು ತಯಾರಾಗುತ್ತಿದ್ದಾರೆ. ಅದು ಗುಜರಾತಿನಲ್ಲಿ ಹಲವು ದಶಕಗಳ ಹಿಂದೆ ಮಾಡಿದ ಪ್ರಯೋಗ ಯಶಸ್ವಿಯಾಗಿದ್ದು ಮೊದಲ ಶ್ವೇತ ಕ್ರಾಂತಿಯನ್ನು ಮೊದಲುಗೊಂಡು ನಂತರ ಬೃಹದಾಕಾರವಾಗಿ ಬೆಳೆದಿದೆ.

ಸ್ವರಾಜ್ಯ ಎಂದರೆ ಮೌಲ್ಯ, ಮಾನವೀಯತೆ, ಗೌರವದಿಂದ ನಡೆಸಿಕೊಳ್ಳುವುದೇ ಆಗಿದೆ.ಆಡಳಿತದಲ್ಲಿ ಇದನ್ನು ಅಳವಡಿಸಿಕೊಳ್ಳಬೇಕಾಗಿದೆ. ಇದನ್ನು ಸಾಧಿಸಲು ನಾವು ಎಸಿ ಹಾಲುಗಳ ಸೆಮಿನಾರು ಮಾತ್ರವಲ್ಲ, ಹಳ್ಳಿಗಳಲ್ಲಿ ಕೆಲಸ ಮಾಡುವ ರೀತಿಯಲ್ಲೂ ಕೆಲಸ ಮಾಡಬೇಕಿದೆ. ಇಲ್ಲಿ ಸಾಂಸ್ಥಿಕ ಸ್ವರೂಪದ ಜೊತೆಗೆ ಸಮಾಜದ ಪಾತ್ರವೂ ಬಹಳ ಮುಖ್ಯವಾಗಿದೆ" ಎಂದರು.

ಸಭೆಯಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರು, ಓಡಿಶಾ ಕೇಂದ್ರಿಯ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳಾದ ಪಿ.ವಿ.ಕೃಷ್ಣಭಟ್, ನೃಪತುಂಗ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀನಿವಾಸ ಬಳ್ಳಿಯವರು, ಕೆಎಸ್‌ಆರ್ಡಿಪಿಆರ್ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳಾದ ತಿಮ್ಮೇಗೌಡರು, ಚಾಣಕ್ಯ ವಿಶ್ವವಿದ್ಯಾಲಯದ ಕುಲಸಚಿವರಾದ ಸುಶಾಂತ್ ಜೋಶಿ, ಹೈಯರ್ ಎಜುಕೇಶನ್ ಕೌನ್ಸಿಲ್ ಚೇರ್ಮನ್ ಗೋಪಾಲ ಜೋಶಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.